ಶ್ರೀ ಬಿ. ಎಲ್. ಗೌಡ (ಮಾನ್ಯ ಕೃಷಿ ಮಂತ್ರಿಗಳು).—

ಅ) ಇಲ್ಲ.

ಆ) ಅಧಿಕ ಮಳೆ ಬೀಳುವ ಪ್ರದೇಶದಲ್ಲಿ ತಂಬಾಕು ಬೆಳೆಯನ್ನು ಬೆಳೆಯಬಾರದು ಎಂಬ ತಿಳುವಳಿಕೆಯನ್ನು ಕೃಷಿ ಇಲಾಖೆಯವರು ನೀಡಿದ್ದಾರೆ ಹಾಗೂ ಇಂತಹ ಪ್ರದೇಶಗಳಲ್ಲಿ ತಂಬಾಕು ಬೆಳೆಗೆ ಪರ್ಯಾಯವಾಗಿ ಬೆಳೆಯಬೇಕಾಗಿರುವ ಇತರ ಬೆಳೆಗಳ ಬಗ್ಗೆಯೂ ಸಲಹೆ ಮಾಡಿದ್ದಾರೆ. ಈ ಬಗ್ಗೆ ಯಾವ ಪರಿಹಾರವನ್ನು ಕೊಡಲಂ ಸರ್ಕಾರಕ್ಕೆ ಸಮರ್ಥನೀಯವಾದ ಕಾರಣಗಳು ಕಂಡುಬಂದಿಲ್ಲ.

ಇ) ಇಲ್ಲ.

ರಾಜ್ಯದ ವಿಶ್ವವಿದ್ಯಾಲಯಂಗಳಲ್ಲಿರುವ ಪ್ರಾಧ್ಯಾಪಕರುಂಗಳ ಸಂಖ್ಯೆ

೯೭. ಡಾ॥ ಪೆಗ್ಗಪ್ಪ ಲಮಾಣಿ (ಬ್ಯಾಡಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿರುವ ಪ್ರಾಧ್ಯಾಪಕರು, ರೀಡರುಗಳಂ ಹಾಗೂ ಅಧ್ಯಾಪಕರುಗಳ ಸಂಖ್ಯೆ ಎಷ್ಟು,

ಆ) ಇದರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಕ್ಕೆ ಸೇರಿದವರ ಸಂಖ್ಯೆ ಎಷ್ಟು (categorywise)

ಇ) ಈ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಅಭ್ಯರ್ಥಿಗಳನ್ನು ತುಂಬುವಾಗ ೧೮ ಪರ್‌ಸೆಂಟ್ ವೀಸಲಾತಿಯ ನಿಯಮವನ್ನು ಪಾಲಿಸಲಾಗಿದೆಯೇ.

ಈ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು ಮತ್ತು ಈ ಕೊರತೆಯನ್ನು ತುಂಬಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು),—

ಅ) ಪ್ರಾಧ್ಯಾಪಕರೆ—೧೭೨
ರೀಡರುಗಳು—೩೪೮
ಅಧ್ಯಾಪಕರುಂ—೯೩೨

ಆ)

	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ
ಪ್ರಾಧ್ಯಾಪಕರು	೨	ಇಲ್ಲ
ರೀಡರುಗಳು	೧೩	೩
ಅಧ್ಯಾಪಕರುಂ	೪೫	೬

ಇ) ಖಾಲಿಯಾಗುವ ಹುದ್ದೆಗಳನ್ನು ವರ್ಗೀಕರಣ ಮಾಡುವಾಗ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಪಾಲಿಸಲಾಗುತ್ತಿದೆ.

ಈ) ಅರ್ಹತೆಯುಳ್ಳ ಅಭ್ಯರ್ಥಿಗಳಂ ಸಿಗದಿರುವ ಕಾರಣ ತುಂಬುವುದರಲ್ಲಿ ಕೊರತೆಯುಂಟಾಗಿದೆ.

ಅಫಜಲ್‌ಪುರ ತಾಲ್ಲೂಕಿನಲ್ಲಿ ಗುರುಭವನ ಕಟ್ಟಿಪ ಬಗ್ಗೆ

ಶ್ರೀ ಹನುಮಂತರಾವ್ ದೇಸಾಯಿ (ಅಫಜಲ್‌ಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಅಫಜಲ್‌ಪುರ ತಾಲೂಕಿನಲ್ಲಿ ಗುರುಭವನ ಕಟ್ಟಡ ಕಟ್ಟಲು ಸಾರ್ವಜನಿಕರಿಂದ ಮತ್ತು ಶಿಕ್ಷಕರಿಂದ ವಸೂಲಾದ ದೇಣಿಗೆ ಹಣ ದುರುಪಯೋಗವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ;

(ಆ) ಜಿಲ್ಲಾ ವಿದ್ಯಾಧಿಕಾರಿಗಳು (ಎಜುಕೇಷನಲ್ ಆಫೀಸರ್) ರವರಿಂದ ನಡೆದ ತನಿಖೆಯು ಈಗ ಯಾವ ಹಂತದಲ್ಲಿದೆ ?